ಕುತಂತ್ರಿ ಅರ್ತೆನ್ಸಿಯಾ ಈಗ ಸಂಚಿನ ಮೇಲೆ ಸಂಚು ಹೂಡುತ್ತಿದ್ದಳು. ಲೀನಾಳಂಥ ಪ್ರೀತಿಯ ಗೆಳತಿಗೆ ಮೋಸಮಾಡುತ್ತಿರುವುದಕ್ಕೆ ಅವಳ ಹೃದಯ ಒಡೆದುಹೋಗುತ್ತಿದೆ; ಆದರೆ ಲೀನಾಳನ್ನು ತಾನಿನ್ನೂ ನೋಡಿಯೇ ಇಲ್ಲದ ಸಮಯದಿಂದಲೇ ಬರ್ತೋಲಿನೋನನ್ನು ಪ್ರೀತಿಸುತ್ತಿರುವುದಾಗಿ ಹಾಗೂ ಹೀಗೂ ಸುತ್ತಿ ಬಳಸಿ ಬರ್ತೋಲಿನೋಗೆ ಮನದಟ್ಟುಮಾಡಿದಳು. ಆ ಪ್ರೀತಿಯೆಂಬುದು ವಿಧಿಯ ಹಾಗೆ ಮೀರಲು ಸಾಧ್ಯವೇ ಇಲ್ಲದ್ದು. ಆದರೆ ಇದರ ನಂತರ ಏನು ನಡೆಯಿತು, ಅದರಲ್ಲಿ ವಿಧಿಯ ಕೈವಾಡ ಎಷ್ಟಿತ್ತೆಂಬುದನ್ನು ಬರ್ತೋಲಿನೋಗೆ ಯೋಚಿಸಲೂ ಸಾಧ್ಯವಾಗಲಿಲ್ಲ.

ಬಡಪಾಯಿ ಒಳ್ಳೆ ಮನಸ್ಸಿನವನೇ! ಅವಳ ಗಾಢ ಸಂಚು ಇಷ್ಟು ಸುಲಭವಾಗಿ ಯಶಸ್ವಿಯಾದದ್ದರಿಂದ ಅವನು ಹತಾಶನೇ ಆದ. ತನ್ನನ್ನು ಮೋಸಗೊಳಿಸಲಾಗಿದೆ ಎಂದು ಅವನಿಗೆ ಅನ್ನಿಸಿತು. ಒಮ್ಮೆ ತನ್ನ ಹಳೆಯ ಮಿತ್ರ ಮೋತ್ತಾನ ಕೊಠಡಿಗೆ ಒಬ್ಬನೇ ಹೋದಾಗ ಸ್ವಲ್ಪ ಹೊತ್ತಿನಲ್ಲೇ ಅವನ ಮನಸ್ಸು ಪಶ್ಚಾತ್ತಾಪದಿಂದ ತುಂಬಿಹೋಯಿತು. ಒಮ್ಮೆಲೇ ಅವನ ದೃಷ್ಟಿ, ಹಾಸಿಗೆಯ ಅಂಚಿನಲ್ಲಿ ನೆಲದ ಮೇಲೆ ಬಿದ್ದಿದ್ದ ಯಾವುದೋ ಹೊಳೆಯುತ್ತಿದ್ದ ವಸ್ತುವೊಂದರ ಮೇಲೆ ಬಿದ್ದಿತು. ಅದು ಒಂದು ಸಣ್ಣ ಚಿನ್ನದ ಲಾಕೆಟ್. ಖಂಡಿತವಾಗಿಯೂ ಅರ್ತೆನ್ಸಿಯಾಳ ಕೊರಳಿನದೇ ಇರಬೇಕು. ಕೈಯಿಂದ ಎತ್ತಿಕೊಂಡು ಅರ್ತೆನ್ಸಿಯಾಳ ನಿರೀಕ್ಷೆಯಲ್ಲೇ ಇದ್ದ. ಅದನ್ನು ಸುಮ್ಮನೆ ಅತ್ತ ಇತ್ತ ಅಲ್ಲಾಡಿಸುತ್ತಿದ್ದಾಗ ಉತ್ಸುಕತೆಯಿಂದ ಬೆರಳಿಂದ ಅಮುಕಿದ್ದರಿಂದ ಇದ್ದಕ್ಕಿದ್ದಂತೆ ಲಾಕೆಟ್ ತೆರೆದುಕೊಂಡಿತು.

ಅವನಿಗೆ ತನ್ನ ಕಣ್ಣುಗಳನ್ನು ನಂಬಲೇ ಆಗಲಿಲ್ಲ. ಲಾಕೆಟ್‌ನ ಒಳಗಡೆ ಒಂದು ಚಿತ್ರದ ಕೆತ್ತನೆ ಇತ್ತು... ಸಿನೋರ್ ಕೊಸಿಮೋ ತಾದ್ದೇಯಿಯ ಅದೇ ಚಿತ್ರ!... ಅವರು ಮುಗುಳ್ನಗುತ್ತ ಅವನ ಕಡೆ ನೋಡುತ್ತ ತನ್ನ ತಲೆಯಮೇಲಿನ ಹ್ಯಾಟನ್ನು ತೆಗೆಯುತ್ತಿದ್ದಾರೆ.

## ಲೂಯಿ ಪಿರೈನೆಲಾ (1867 – 1939)

ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕ ಲೂಯಿ ಪಿರೈನೆಲಾ ಸಿಸಿಲಿ ದೇಶದವನು. ಅನೇಕ ಕಥೆಗಳು ಮತ್ತು ಕಾದಂಬರಿಗಳನ್ನು ಬರೆದಿದ್ದಾನೆ. ಆದರೆ ಅವನಿಗೆ ಹೆಚ್ಚಿನ ಖ್ಯಾತಿ ತಂದುಕೊಟ್ಟಿರುವುದು ನಾಟಕಗಳು. 'six characters in search of an author' ಎಂಬುದು ಅವನ ಪ್ರಸಿದ್ಧ ನಾಟಕ.

## ಆರ್. ಲಕ್ಷ್ಮೀನಾರಾಯಣ

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕ ಪ್ರಾಧ್ಯಾಪಕ, ಪ್ರಿನ್ಸಿಪಾಲ್ ಮತ್ತು ಜಂಟಿ ನಿರ್ದೇಶಕರಾಗಿ ನಿವೃತ್ತರಾಗಿರುವ ಅನುವಾದಕರು ಪ್ರಸ್ತುತ ಬೆಂಗಳೂರಿನಲ್ಲಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಅಧ್ಯಕ್ಷರು.

'ಮಾಸ್ತಿ', 'ಎಸ್.ವಿ. ಪರಮೇಶ್ವರಭಟ್ಟ', 'ಆಹ್ಲಾದ', 'ಚೆಲುವಿನ ನೆಲೆಗಳ ಹಾದಿಯಲ್ಲಿ' (ವಿಮರ್ಶಾ ಕೃತಿಗಳು) ಮೊದಲಾದ 8 ಸ್ವತಂತ್ರ ಕೃತಿಗಳನ್ನು ಪ್ರಕಟಿಸಿದ್ದಾರೆ. ನಾಲ್ಕು ದಶಕಗಳಿಂದ ಇಂಗ್ಲಿಷ್, ಹಿಂದಿ ಮತ್ತು ಸಂಸ್ಕೃತಗಳಿಂದ ಕೃತಿಗಳನ್ನು ಅನುವಾದಿಸುತ್ತ ಬಂದಿದ್ದಾರೆ. 'ಬೇಗುದಿ', 'ವಕ್ರೋಕ್ತಿ ಮತ್ತು ಶೈಲಿಶಾಸ್ತ್ರದ ಪರಿಕಲ್ಪನೆಗಳು', 'ಶ್ರೇಷ್ಠ ಬರ್ಮೀ ಕಥೆಗಳು'. ಅಮೃತಾ ಪ್ರೀತಮ್ ಅವರ ಆಯ್ದ ಕಥೆಗಳು, ಕುಂತಕನ 'ಕನ್ನಡ ವಕ್ರೋಕ್ತಿ ಜೀವಿತ' ಮೊದಲಾದ 14 ಕೃತಿಗಳನ್ನು ಅನುವಾದಿಸಿದ್ದಾರೆ.